**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ರಾಣೇಬೆನ್ನೂರು.**

**ಸಿಸಿ ನಂಬರಃ 1890/2023**

ಸಿ ಡಬ್ಲ್ಯೂ -6

ಪಿ ಡಬ್ಲ್ಯೂ-5

| | | |
|---|---|---|
| **ಸಾಕ್ಷಿದಾರರ ಹೆಸರು** | : | ಹನುಮಂತಪ್ಪ |
| **ತಂದೆ/ಗಂಡನ ಹೆಸರು** | : | ಚಂದ್ರಪ್ಪ ಕದರಮಂಡಲಗಿ |
| **ವಯಸ್ಸು** | : | 42 ವರ್ಷ |
| **ಉದ್ಯೋಗ** | : | ಶಾಮಿಯಾನ ಕೆಲಸ |
| **ವಾಸ** | : | ರಾಣೇಬೆನ್ನೂರು |

**ದಿನಾಂಕಃ 08-10-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ಸಾಕ್ಷಿಗೆ ಒಂದು ಘಟನಾ ಸ್ಥಳದ ಮಹಜರ್ ನ್ನು ತೋರಿಸಲಾಯಿತು. ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಸ್ಥಳ ಮಹಜರ್ ನ್ನು ಈಗ ನಿ ಪಿ -5 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ -5 ಬಿ ಎಂದು ಗುರುತಿಸಲಾಯಿತು. ನಿ ಪಿ -5 ಮಹಜರ್ ಗೆ ಸುಮಾರು ಒಂದು ವರ್ಷದ ಹಿಂದೆ ರಾಣೇಬೆನ್ನೂರು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನನಗೆ ಈ ಕೇಸಿನ ಬಗ್ಗೆ ಎನೂ ಗೊತ್ತಿಲ್ಲ. ನನ್ನ ಸಮಕ್ಷಮ ಆರೋಪಿತನು ತೋರಿಸಿದ ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿಲ್ಲ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಲಾಯಿತು. ಆ ಪೋಟೋವನ್ನು ಈಗ ನಿ ಪಿ -6 ಎಂದು ಗುರುತಿಸಲಾಯಿತು.ಆ ಪೋಟೋವನ್ನು ಪೋಲಿಸರು ಮೆಡ್ಲೇರಿಯ ದಾರಿಯಲ್ಲಿ ತೆಗೆದಿರುತ್ತಾರೆ. ಪೋಟೋವನ್ನು ಯಾವ ಉದ್ದೇಶಕ್ಕಾಗಿ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

( ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ಅವರು ನಿವೇದಿಸಿಕೊಂಡಿದ್ದು ಸದರಿ ನಿವೇದನೆಯನ್ನು ಪರಿಗಣಿಸಿ ಸ.ಸ.ಅ ಅವರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ`**

ದಿನಾಂಕ 20-08-2023 ರಂದು ನನ್ನ ಸಮಕ್ಷಮ ರಾಣೇಬೆನ್ನೂರು ಗ್ರಾಮಾಂತರ ಪೋಲಿಸರು ಆರೋಪಿತನು ತೋರಿಸಿದ ಸ್ಥಳದಲ್ಲಿ ನಿ ಪಿ -5 ರಂತೆ ಮಹಜರ್ ಮಾಡಿರುತ್ತಾರೆ

ಸಿ ಡಬ್ಲ್ಯೂ -6

ಪಿ ಡಬ್ಲ್ಯೂ-5

ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಮತ್ತು ಚಾಸಾ-7 ರವರು ಹಾಜರಿದ್ದು ಪೋಲಿಸರು ಬರೆದ ಮಹಜರ್ ಗೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತನು ತೋರಿಸಿದ ಸ್ಥಳದಲ್ಲಿ ನಿ ಪಿ -6 ರಂತೆ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ನನಗೆ ಎನೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿತನ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.